## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 862 |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಗೋಹತ್ಯೆ ನಿಷೇಧದ ನಂತರ ಪ್ರತಿ ವರ್ಷ ವಧೆಯಾಗದೆ ಕಸಾಯಿ ಖಾನೆಗೆ ಹೋಗದೆ ಉಳಿದುಕೊಳ್ಳುತ್ತಿರುವ ಗೋವುಗಳ ಅಂದಾಜು ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಗೋಹತ್ಯೆ ನಿಷೇಧದ ನಂತರ ಪ್ರತಿ ವರ್ಷ ವಧೆಯಾಗದೆ ಕಸಾಯಿಖಾನೆಗೆ ಹೋಗದೆ ಉಳಿದುಕೊಳ್ಳುತ್ತಿರುವ ಜಾನುವಾರುಗಳ ನಿಖರವಾದ ಮಾಹಿತಿ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. |
| ಆ | ಈ ಗೋವುಗಳ ಮೇವು, ನೀರು ರಕ್ಷಣೆಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ರೈತರ ವಯಸ್ಸಾದ, ಸಾಕಲಾಗದ, ನಿರುಪಯುಕ್ತ, ಅನಾರೋಗ್ಯ ಪೀಡಿತ, ಅನಧಿಕೃತ ಜಾನುವಾರುಗಳ ಸಾಗಾಣಿಕೆ ಸಮಯದಲ್ಲಿ ವಶಪಡಿಸಿಕೊಂಡ ಜಾನುವಾರುಗಳನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಕಳುಹಿಸುವ ಜಾನುವಾರುಗಳ ನಿರ್ವಹಣೆ (ಮೇವು, ನೀರು ಮತ್ತು ರಕ್ಷಣೆಗಾಗಿ) ಮಾಡಲು ಪಿಂಜರಾಪೋಲ್ ಮತ್ತು ಗೋಶಾಲೆಗಳಿಗೆ ನೆರವು ಕಾರ್ಯಕ್ರಮದಡಿಯಲ್ಲಿ 141 ಗೋಶಾಲೆಗಳಿಗೆ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.<br>1) 2020-21 ನೇ ಸಾಲಿನಲ್ಲಿ ರೂ.61.00 ಲಕ್ಷಗಳು<br>2) 2021-22 ನೇ ಸಾಲಿನಲ್ಲಿ ರೂ.33.70.ಲಕ್ಷಗಳು<br>3) 2022-23 ನೇ ಸಾಲಿನಲ್ಲಿ ರೂ.33.70 ಲಕ್ಷಗಳು<br>ಪುಣ್ಯ ಕೋಟಿ ದತ್ತು ಯೋಜನೆ (www.punyakoti.karahvs.in) web portal ನಲ್ಲಿ ಒಟ್ಟು 227 ಗೋಶಾಲೆಗಳು ನೋಂದಣಿಯಾಗಿರುತ್ತವೆ. ಈ ಗೋಶಾಲೆಗಳಲ್ಲಿ ಒಟ್ಟು 33787 ಜಾನುವಾರುಗಳು ಇರುತ್ತವೆ. ಮಾರ್ಚ್-2023 ನೇ ಮಾಹೆಯಲ್ಲಿ ಈ ಜಾನುವಾರುಗಳ ನಿರ್ವಹಣೆಗೆ ರೂ.27.35 ಕೋಟಿ ಅನುದಾನ ನೀಡಲಾಗಿದೆ. |
| ಇ | ಪ್ರಸ್ತುತ ಸಾಲಿನಲ್ಲಿ ಗೋಶಾಲೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಮತ್ತು ಹೊಸ ಗೋಶಾಲೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | 2023-24ನೇ ಸಾಲಿನಲ್ಲಿ ಗೋಶಾಲೆಗಳ ನಿರ್ವಹಣೆಗೆ ಒಟ್ಟು ರೂ.120.66 ಲಕ್ಷ ಬಿಡುಗಡೆ ಮಾಡಲಾಗಿದೆ. ಈ ಸಾಲಿನಲ್ಲಿ ಹೊಸ ಗೋಶಾಲೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಇ-ಪಸಂಮೀ 227 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**